# ಗೆದ್ದ ಮತದಾರ

## 2ನೇ ಹಂತದಲ್ಲಿ ಶೇ.80 ಮತದಾನ | 30ಕ್ಕೆ ಫಲಿತಾಂಶ

## ಕಾರ್ಯಕರ್ತರ ಪಡೆ ಕಟ್ಟಲು ಪಕ್ಷಗಳಿಂದ ಚುನಾವಣೆ ಬಳಕೆ



ಬೆಳಗಾವಿಯ ಚಿಕ್ಕೋಡಿ ತಾಲೂಕಿನಲ್ಲಿ ಕಂಡು ಬಂದ ವೃದ್ಧ ಮತದಾರರ ಉತ್ಸಾಹ.

**ಬೆಂಗಳೂರು:** ಕೊರೊನಾ ಕಾರಣಕ್ಕೆ ಏಳೆಂಟು ತಿಂಗಳು ಸರ್ಕಾರ ಮತ್ತು ಚುನಾವಣಾ ಆಯೋಗದ ನಡುವಿನ ಕಾನೂನು ಸಂಘರ್ಷದ ಬಳಿಕ ನಡೆದ ಗ್ರಾಮ ಪಂಚಾಯಿತಿ ಸಾರ್ವತ್ರಿಕ ಚುನಾವಣೆಯ ಎರಡೂ ಹಂತದ ಮತದಾನ ಮುಗಿದಿದ್ದು ಅಭ್ಯರ್ಥಿಗಳು ಡಿ.30ರತ್ತ ಮುಖ ಮಾಡಿದ್ದಾರೆ.

ಕೋವಿಡ್-19ನಂಥ ವಿಷಮ ಪರಿಸ್ಥಿತಿಯಲ್ಲಿ ನಡೆದ ಈ ಬಾರಿಯ ಗ್ರಾ.ಪಂ ಚುನಾವಣೆ ಹಲವು ವೈಶಿಷ್ಟತೆಗಳಿಂದಲೂ ಕೂಡಿತ್ತು. ಪಕ್ಷ ರಹಿತ ಚುನಾವಣಾ ವ್ಯವಸ್ಥೆ ಆಗಿದ್ದರೂ, ಸಾಕಷ್ಟು 'ರಾಜಕಾರಣ' ನಡೆದಿದೆ. 'ಪಕ್ಷದ ಬೆಂಬಲಿತ ಅಭ್ಯರ್ಥಿ' ಅನ್ನುವ ಮೂಲಕ ಕಾರ್ಯಕರ್ತರ ಪಡೆ ಕಟ್ಟಲು 'ರಂಗ ತಾಲೀಮು' ಆಗಿರುವ ಗ್ರಾ.ಪಂ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳು ಸಾಕಷ್ಟು ಬೆವರು ಸುರಿಸಿವೆ. ಮುಂಬರುವ ವಿಧಾನಸಭೆಮತ್ತುಲೋಕಸಭೆ ಚುನಾವಣೆಗೆ ಈ ಬಾರಿಯ ಗ್ರಾ.ಪಂ ಚುನಾವಣೆ ಬುನಾದಿ ಆಗಲಿದೆ ಎಂಬುದು ರಾಜಕೀಯ ಪಕ್ಷಗಳ ಲೆಕ್ಕಾಚಾರವಾಗಿದೆ.




ಇನ್ನೊಂದಡೆ ಈ ಬಾರಿಯ ಗ್ರಾಮ ಪಂಚಾಯಿತಿ ಚುನಾ ವಣೆಯಲ್ಲಿ ವೈದ್ಯರು, ಇಂಜಿನಿಯರ್‌ಗಳು ಸೇರಿದಂತೆ ಉನ್ನತ ವ್ಯಾಸಾಂಗ ಮಾಡಿದ ವರು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿ ಯಾಗಿರುವುದು ವಿಶೇಷ. ಕೊರೊನಾ ಪರಿಣಾಮ ನಗರ ಗಳಿಂದ ಹಳ್ಳಿಗಳಿಗೆ ವಾಪಸ್ ಬರದ ಅನೇಕರು 'ಸೇವಾ ಮನೋಭಾವ' ದೊಂದಿಗೆ ಮತ್ತು ಗ್ರಾಮಾ ಭಿವೃದ್ಧಿಯ ಕನಸು ಹೊತ್ತು ಚುನಾವಣೆಗಳಲ್ಲಿ ಸ್ಪರ್ಧಿಸಿದ್ದಾರೆ.

ಗ್ರಾಮೀಣ ಮತದಾರರು ಸಾಮಾನ್ಯವಾಗಿ ಕಾಂಗ್ರೆಸ್ ಪರ ಇರುತ್ತಾರೆ. ಆ ಕಾರಣಕ್ಕಾಗಿ ಗ್ರಾಮ ಪಂಚಾಯಿತಿಗಳ ಮೇಲೆ ಕಾಂಗ್ರೆಸ್ ಪಕ್ಷ ತನ್ನ ಪ್ರಾಬಲ್ಯ ಹೊಂದಿರುತ್ತದೆ ಎಂಬುದು ಈವರೆಗೆ ನಡೆದುಕೊಂಡು ಬಂದ ರಾಜಕೀಯ ವಿಶ್ಲೇಷಣೆಯಾಗಿದೆ. ಆದರೆ, ಈಗ ಕಾಲ ಬದಲಾಗಿದೆ. ಹಳ್ಳಿಗಳಲ್ಲಿ ರಾಜಕೀಯ ಪ್ರಜ್ಞೆ ಬೆಳೆಯುವುದರ ಜೊತೆಗೆ 'ಪಕ್ಷ ರಾಜಕಾರಣವೂ' ಪ್ರವೇಶಿಸಿದೆ. ಕಾಂಗ್ರೆಸ್‌ಗೆ ತಳಪಾಯ ಉಳಿಸಿಕೊಳ್ಳುವ ಸವಾಲು ಎದುರಾಗಿದ್ದರೆ, ಬಿಜೆಪಿಗೆ ಅಡಿಪಾಯ ಗಟ್ಟಿಗೊಳಿಸಿ ಅದನ್ನು ವಿಸ್ತರಿಸಿಕೊಳ್ಳುವ ಅವಕಾಶದ ಬಾಗಿಲುಗಳ ಸಂಖ್ಯೆ ಹೆಚ್ಚಾಗಿದೆ. ಅನುಕೂಲಸಿಂಧು ಸಂದರ್ಭಗಳನ್ನು ತನ್ನದಾಗಿಸಿಕೊಳ್ಳಲು ಜೆಡಿಎಸ್ ಪ್ರಯತ್ನಿಸಿದೆ.

ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ತಮ್ಮ ಪಕ್ಷದ ಬೆಂಬಲಿತ ಅಭ್ಯರ್ಥಿಗಳ ಪರ ಬಿಜೆಪಿ, ಕಾಂಗ್ರೆಸ್, ಜೆಡಿಎಸ್‌ನ ಘಟಾನುಘಟಿ ನಾಯಕರು ಪ್ರಚಾರ ನಡೆಸಿದ್ದರು.

▶ 7ನೇ ಪುಟಕ್ಕೆ

### 2ನೇ ಹಂತದಲ್ಲೂ ಶೇ.80.71 ಮತದಾನ

**ಬೆಂಗಳೂರು:** ಗ್ರಾಮ ಪಂಚಾಯಿತಿ ಚುನಾವಣೆಯ ಎರಡನೇ ಹಂತಕ್ಕೆ ಭಾನುವಾರ ನಡೆದ ಮತದಾನ ಬಹುತೇಕ ಶಾಂತಿಯುತವಾಗಿ ಮುಗಿದಿದ್ದು, ಒಟ್ಟಾರೆಯಾಗಿ ಶೇ.80.71ರಷ್ಟು ಮತದಾನವಾಗಿದೆ. ಮತಪತ್ರದಲ್ಲಿ ಚಿನ್ಹೆ ಬದಲು, ರಾಜಕೀಯ ಪಕ್ಷಗಳ ಬೆಂಬಲಿಗರ ನಡುವೆ ಗಲಾಟೆ, ಮತದಾರರಿಗೆ ಹಣ, ಗೃಹ ಬಳಕೆ ವಸ್ತುಗಳನ್ನು ಹಂಚುತ್ತಿರುವ ಘಟನೆಗಳು, ಮತದಾರರಪಟ್ಟಿಯಲ್ಲಿ ಹೆಸರು ನಾಪತ್ತೆ ಸೇರಿದಂತೆ ಕೆಲವೊಂದು ಸಣ್ಣಪುಟ್ಟ ಘಟನೆಗಳನ್ನು ಹೊರತುಪಡಿಸಿ ಮತದಾನ ಬಹುತೇಕ ಶಾಂತಿಯುವಾಗಿ ನಡೆದಿದೆ. ಬಳ್ಳಾರಿ, ದಾವಣಗೆರೆ ಜಿಲ್ಲೆಯಲ್ಲಿ ಒಂದೆರಡು ಕಡೆಗಳಲ್ಲಿ ಮರು ಮತದಾನಕ್ಕೆ ಆದೇಶಿಸಲಾಗಿದೆ.

---

ಚುನಾವಣೆಗೆ ಬಿಜೆಪಿ ಉತ್ತಮ ತಯಾರಿ ಮಾಡಿಕೊಂಡಿತ್ತು. ಕುಟುಂಬ ಮಿಲನ, ಪಂಚರತ್ನ ಯೋಜನೆಗಳು ಅತ್ಯಂತ ಯಶಸ್ವಿಯಾಗಿದೆ. ಬಿಜೆಪಿಗೆ ರಾಜ್ಯಾದ್ಯಂತ ಅಭೂತಪೂರ್ವ ಬೆಂಬಲ ಸಿಕ್ಕಿದೆ.

ನಳೀನ್ ಕುಮಾರ್ ಕಟೀಲ್,
ಬಿಜೆಪಿ ರಾಜ್ಯಾಧ್ಯಕ್ಷ

ಎಲ್ಲ ಪಕ್ಷಗಳು ತಮ್ಮ ಕಾರ್ಯಕರ್ತರನ್ನು ಗೆಲ್ಲಿಸಿಕೊಂಡು ಬರುವ ಪ್ರಯತ್ನ ಮಾಡುತ್ತಾರೆ. ನಮ್ಮ ಪಕ್ಷವೂ ಪ್ರಯತ್ನ ನಡೆಸಿದೆ. ಹಳೆ ಮೈಸೂರು ಭಾಗದಲ್ಲಿ ಶೇ.70 ರಷ್ಟು ಪಂಚಾಯಿತಿಗಳು ನಮ್ಮ ಹಿಡಿತಕ್ಕೆ ಬರುವ ವಿಶ್ವಾಸವಿದೆ.

ಎಚ್.ಡಿ. ಕುಮಾರಸ್ವಾಮಿ,
ಜೆಡಿಎಸ್ ರಾಜ್ಯಾಧ್ಯಕ್ಷ

ಯಾವಾಗಲೂ ಪಂಚಾಯಿತಿ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಹೆಚ್ಚಿನ ಸ್ಥಾನಗಳಲ್ಲಿ ಗೆಲ್ಲುತ್ತಾರೆ. ನಮ್ಮದು ಗ್ರಾಮೀಣ ಪ್ರದೇಶದಲ್ಲಿ ಗಟ್ಟಿಯಾಗಿದೆ. ಈ ಬಾರಿಯೂ ಹೆಚ್ಚು ಮಂದಿ ಗೆಲ್ಲುತ್ತಾರೆ.

ಸತೀಶ್ ಜಾರಕಿಹೊಳಿ,
ಕೆಪಿಸಿಸಿ ಕಾರ್ಯಾಧ್ಯಕ್ಷ

# ಗೆದ್ದ ಮತ್ತದಾರ

**1ನೇ ಪುಟದಿಂದ▸** ಪಕ್ಷದ ವತಿಯಿಂದ ಸಭೆ, ಸಮಾರಂಭಗಳನ್ನು ಆಯೋಜಿಸಲಾಗಿತ್ತು. ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಗ್ರಾ.ಪಂ ಚುನಾವಣೆಗಳನ್ನು ಸಾಕಷ್ಟು ಗಂಭೀರವಾಗಿ ಪರಿಗಣಿಸಿದ್ದರು. ಪಕ್ಷದ ಅಧಿಕೃತ ಚಿಹ್ನೆ ಇಲ್ಲ ಅನ್ನುವುದು ಬಿಟ್ಟರೆ, ಇಡೀ ಚುನಾವಣೆ ಪಕ್ಷಗಳ ಆಧಾರದಲ್ಲಿ ನಡೆದಿದೆ. ಗ್ರಾ.ಪಂ ಚುನಾವಣೆಗೆ ವಿಧಾನಮಂಡಲ ಅಧಿವೇಶನವನ್ನು ಸಹ ಮೊಟಕುಗೊಳಿಸಲಾಗಿತ್ತು

**ಬಿಜೆಪಿ ಗ್ರಾಮ ಸ್ವರಾಜ್ ಸಮಾವೇಶ:** ಕಾಂಗ್ರೆಸ್ ಮುಕ್ತ ಗ್ರಾಮ ಪಂಚಾಯಿತಿ ಎಂಬ ಘೋಷಣೆಯೊಂದಿಗೆ ಚುನಾವಣೆಗೆ ಗೆಲುವಿನ ಕಾರ್ಯತಂತ್ರ ರೂಪಿಸಲು ನ.27ರಿಂದ ಡಿ.7ರವರೆಗೆ ಜಿಲ್ಲಾ ಮಟ್ಟದಲ್ಲಿ 'ಗ್ರಾಮ ಸ್ವರಾಜ್ ಸಮಾವೇಶ'ಗಳನ್ನು ಹಮ್ಮಿಕೊಂಡಿತ್ತು. ಇದರ ಜೊತೆಗೆ ಜಿಲ್ಲಾ ಉಸ್ತುವರಿ ಸಚಿವರಿಗೆ ಆಯಾ ಜಿಲ್ಲೆಗಳ ಉಸ್ತುವಾರಿ ನೀಡಲಾಗಿತ್ತು. ಇದಲ್ಲದೇ ಸಚಿವರು, ಸಂಸದರು, ಶಾಸಕರು ಹಾಗೂ ರಾಜ್ಯ ಮಟ್ಟದ ಪದಾಧಿಕಾರಿಗಳನ್ನೊಳಗೊಂಡ 6 ತಂಡಗಳನ್ನು ರಚಿಸಲಾಗಿತ್ತು. ಬೆಳಗಾವಿಯಲ್ಲಿ ನಡೆದ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಗ್ರಾ.ಪಂ ಚುನಾವಣೆ ಪ್ರಮುಖ ವಿಷಯವಾಗಿತ್ತು. ಚುನಾವಣೆಗೆ ವಾರ್ ರೂಂ, ಕಾಲ್ ಸೆಂಟರ್, ಪ್ರತಿ ಬೂತ್‌ನಲ್ಲಿ ಐವರು ಕಾರ್ಯಕರ್ತರ 'ಪಂಚರತ್ನ' ತಂಡ ರಚನೆ, ಪೇಜ್ ಪ್ರಮುಖ ನಿಯೋಜನೆ, ಕುಟುಂಬ ಮಿಲನ ಎಂಬ ಸೂತ್ರಗಳನ್ನು ಬಿಜೆಪಿ ರೂಪಿಸಿತ್ತು.

**ಕ್ಷೇತ್ರವಾರು ಸಮಾವೇಶ:** ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ತಮ್ಮ ಪಕ್ಷದ ಬೆಂಬಲಿತ ಅಭ್ಯರ್ಥಿಗಳನ್ನು ಗರಿಷ್ಠ ಸಂಖ್ಯೆಯಲ್ಲಿ ಗೆಲ್ಲಿಸಿಕೊಂಡು ಬರಲು ಕಾಂಗ್ರೆಸ್ ಪಕ್ಷ ಸಹ ರಣತಂತ್ರ ರೂಪಿಸಿತ್ತು. ಇದಕ್ಕಾಗಿ ರಾಜ್ಯದ ಬಹುತೇಕ ಕಡೆ ವಿಧಾನಸಭಾ ಕ್ಷೇತ್ರವಾರು ಸಮಾವೇಶಗಳನ್ನು ಮಾಡಲಾಗಿತ್ತು. ಚಾಮುಂಡಿ ವಿಧಾನಸಭಾ ಕ್ಷೇತ್ರದಲ್ಲಿ ವಿಪಕ್ಷ ನಾಯಕ ಸಿದ್ಧರಾಮಯ್ಯ ಸಮಾವೇಶ ನಡೆಸಿದ್ದರು, ಕಾಂಗ್ರೆಸ್ ಶಾಸಕರು, ಮಾಜಿ ಸಚಿವರು ಹಾಗೂ ಮುಖಂಡರ ನೇತೃತ್ವದಲ್ಲಿ ಸಮಿತಿಗಳನ್ನು ರಚಿಸಿ ಗ್ರಾ.ಪಂ ಚುನಾವಣೆಯ ಹೊಣೆ ವಹಿಸಲಾಗಿತ್ತು.

**ನೆಲೆ ಇದ್ದ ಕಡೆ ಜೆಡಿಎಸ್ ಸಕ್ರಿಯ:** ಬಿಜೆಪಿ-ಕಾಂಗ್ರೆಸ್‌ನಂತೆ ಜೆಡಿಎಸ್ ಸಹ ಗ್ರಾ.ಪಂ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿತ್ತು. ಪಕ್ಷದ ನೆಲೆ-ಗಟ್ಟಿ ಇರುವ ಕಡೆ ತನ್ನದೇ ಗೆಲುವಿನ ತಂತ್ರಗಳನ್ನು ಹಣೆದಿದ್ದ ಜೆಡಿಎಸ್ ವಿಶೇಷವಾಗಿ ಹಳೆ ಮೈಸೂರು ಭಾಗದಲ್ಲಿ ಗಮನ ಹರಿಸಿತ್ತು. ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಹಾಗೂ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ನೇತೃತ್ವದಲ್ಲಿ ಚುನಾವಣಾ ಸಿದ್ಧತಾ ಸಭೆ ನಡೆಸಲಾಗಿತ್ತು.